ಕೋಟಿ ರೂಪಾಯಿಗಳ ವೆಚ್ಚದ ನಾಲ್ಕು ಯೋಜನೆಗಳು ಈಗ ರಾಜ್ಯದಲ್ಲಿ ಜಾರಿಯಲ್ಲಿವೆ. ಕರಾವಳಿ ಪ್ರದೇಶ ಹಾಗೂ ಮಂಗಳೂರು ನಗರಾಭಿವೃದ್ಧಿಗಾಗಿ ಏಷ್ಯನ್ ಅಭಿವೃದ್ಧಿ ಬ್ಯಾಂಕಿನಿಂದ ನೆರವನ್ನು ಪಡೆಯಲು ಉದ್ದೇಶಿಸಿ ಯೋಜನೆಯನ್ನು ರೂಪಿಸಲಾಗುತ್ತಿದೆ. ಯೋಜನೆಯ ವರದಿ ಸಿದ್ದವಾದ ನಂತರ ನೆರವಿನ ಪ್ರಮಾಣ ಸ್ಪಷ್ಟವಾಗಿ ಗೊತ್ತಾಗುತ್ತದೆ.

ಹೊಸ ಜಿಲ್ಲೆಗಳಿಗೆ ಜಿಲ್ಲಾ ನ್ಯಾಯಾಲಯಗಳ ಸ್ಥಾಪನೆ ಬಗ್ಗೆ.

2928:(4124)

ಶ್ರೀ.ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ ಶಾಸನ ರಚನೆ, ವಾರ್ತಾ ಮತ್ತು ಪ್ರಚಾರ ಹಾಗೂ ಪ್ರವಾಸೋದ್ಯಮ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರವು ಸೇರಿದಂತೆ 7 ಹೊಸ ಜಿಲ್ಲೆಗಳಲ್ಲಿ ಜಿಲ್ಲಾ ನ್ಯಾಯಾಲಯಗಳನ್ನು ಯಾವಾಗ ಸ್ಥಾಪಿಸಲಾಗುವುದು?

ಆ) ಕರ್ನಾಟಕ ರಾಜ್ಯದಲ್ಲಿ ಎಷ್ಟು ಕಾರ್ಮಿಕ ನ್ಯಾಯಾಲಯಗಳು ಇವೆ?

ಇ) ಕಾರ್ಮಿಕ ನ್ಯಾಯಾಲಯದಲ್ಲಿ ಕೊರತೆ ಇರುವ ನ್ಯಾಯಾಧೀಶರ ಸಂಖ್ಯೆ ಎಷ್ಟು?

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಸಚಿವರು):

ಅ) ಚಾಮರಾಜನಗರ ಜಿಲ್ಲೆಯೂ ಸೇರಿದಂತೆ ಎಲ್ಲಾ 7 ಹೊಸ ಜಿಲ್ಲೆಗಳಿಗೆ ಜಿಲ್ಲಾ ಮತ್ತು ಸತ್ರನ್ಯಾಯಾಲಯಗಳನ್ನು ಸ್ಥಾಪಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. ಈ ನ್ಯಾಯಾಲಯಗಳಿಗೆ ಹುದ್ದೆಗಳನ್ನು ಸೃಜಿಸುವುದು ಒಳಗೊಂಡಂತೆ ಕಟ್ಟಡಗಳನ್ನು ಗುರುತಿಸುವುದು ಹಾಗೂ ನ್ಯಾಯಾಲಯಗಳನ್ನು ಸ್ಥಾಪಿಸಲು ಅವಶ್ಯವಾದ ಇತರೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಆ) ಕರ್ನಾಟಕ ರಾಜ್ಯದಲ್ಲಿ 12 ಕಾರ್ಮಿಕ ನ್ಯಾಯಾಲಯಗಳಿವೆ.

ಇ) ಈ ನ್ಯಾಯಾಲಯದಲ್ಲಿ ನ್ಯಾಯಾಧೀಶರ ಕೊರತೆ ಇರುವುದಿಲ್ಲ.

ನವ ದೆಹಲಿಯಲ್ಲಿನ ವಾರ್ತಾ ಇಲಾಖೆಯ ಕಾರ್ಯವನ್ನು ಉತ್ತಮ ಪಡಿಸುವುದು.

2929:(4125)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ವಾರ್ತಾ ಮತ್ತು ಪ್ರಚಾರ

ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಾರ್ತಾ ಇಲಾಖೆಯನ್ನು ಆಧುನೀಕರಣಗೊಳಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಆ) ವಾರ್ತಾ ಇಲಾಖೆಯ ಕೇಂದ್ರ ಕಾರ್ಯಾಲಯ ಇರುವ ಸ್ಥಳದಲ್ಲಿ ಹೊಸ ಕಟ್ಟಡಗಳನ್ನು ವಾರ್ತಾ ಇಲಾಖೆ ಕಟ್ಟುವ ಯೋಜನೆ ಸರ್ಕಾರಕ್ಕೆ ಇದೆಯೇ?

ಇ) ದೆಹಲಿಯಲ್ಲಿರುವ ವಾರ್ತಾ ಇಲಾಖೆಯ ಕಾರ್ಯಾಲಯವನ್ನು ಉತ್ತಮಪಡಿಸಲು ನರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರಿ ಎಂ.ಸಿ.ನಾಣಯ್ಯ (ಕಾನೂನು, ವಾರ್ತಾ ಮತ್ತು ಪ್ರಚಾರ ಸಚಿವರು):

ಅ) ವಾರ್ತಾ ಮತ್ತು ಪ್ರಚಾರ ಇಲಾಖೆಯನ್ನು ಆಧುನೀಕರಣಗೊಳಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗದೆ.

1) ಇಲಾಖೆಯಲ್ಲಿ ಗಣಕ ಯಂತ್ರಗಳ ಸ್ಥಾಪನೆ.
2) ಇಂಟರ್‌ನೆಟ್ ಸಂಪರ್ಕ
3) ಕನ್ನಡ ಸುದ್ದಿ ಜಾಲ ವಿಸ್ತರಣೆ
4) ಉಗ್ರಾಣದ ಚಲನಚಿತ್ರಗಳನ್ನು ಸಿ.ಡಿ.ಕ್ಯಾಸೆಟ್‌ಗಳಿಗೆ ಪರಿವರ್ತಿಸುವುದು.
5) ವಿಡಿಯೋ ಚಿತ್ರೀಕರಣ ಘಟಕ ಸ್ಥಾಪನೆ

ಆ) ಇದೆ.

ಇ) ನವದೆಹಲಿಯಲ್ಲಿರುವ ಕರ್ನಾಟಕ ವಾರ್ತಾ ಕೇಂದ್ರ ಕಛೇರಿಯನ್ನು ಆಧುನೀಕರಿಸಲು ಫ್ಯಾಕ್ಸ್ ಯಂತ್ರ, ಗಣಕಯಂತ್ರ ಹಾಗೂ ಇತರೆ ಅಗತ್ಯ ಉಪಕರಣಗಳನ್ನು ಒದಗಿಸಲಾಗಿದೆ.

ಅಧ್ಯಕ್ಷರು:- ನಾಳೆ ದಿನದ ಅಜೆಂಡಾವನ್ನು ಬೆಳಿಗ್ಗೆ 11 ಗಂಟೆಗೆ ಎಂದು ತೋರಿಸಿ ಈಗಾಗಲೇ ಕಳುಹಿಸಿರುವುದರಿಂದ ಇಲ್ಲಿಗೆ ಬರದೆ ಇರತಕ್ಕಂಥವರಿಗೆ ಪತ್ರಿಕೆಯವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಾಳೆ ಸದನದ ಕಲಾಪಗಳು ಬೆಳಗ್ಗೆ 9-00 ಗಂಟೆಗೆ ಪ್ರಾರಂಭವಾಗುತ್ತವೆ. ಎಲ್ಲರೂ ಸಹಕರಿಸಬೇಕಾಗಿ ವಿನಂತಿ ಮಾಡಿಕೊಳ್ಳುತ್ತೇನೆ.

ಈಗ ಸದನವನ್ನು ಮುಂದೂಡುತ್ತಿದ್ದೇನೆ ಸದನವು ಪುನಃ ನಾಳೆ ಬೆಳಗ್ಗೆ 9-00 ಗಂಟೆಗೆ ಸಮಾವೇಶಗೊಳ್ಳುತ್ತದೆ. (ಸದನವು ರಾತ್ರಿ 9-05 ಗಂಟೆಗೆ ಮುಂದೂಡಲ್ಪಟ್ಟು ದಿನಾಂಕ: 10-11-98ರ ಬೆಳಗ್ಗೆ 9-00 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)

(B)025217